*ಪಿ.ಎನ್. ಶ್ರೀವತ್ಸ, ಬೆಂಗಳೂರು*
*ಇತ್ತೀಚೆಗೆ ದಿನಪತ್ರಿಕೆಯ ತುಂಬಾ ಹೆಸರು ಬದಲಾವಣೆಯೇ ತುಂಬಿರಲು ಕಾರಣ?*





ಅಪ್ಪ ಅಮ್ಮ ಇಟ್ಟ ಹೆಸರನ್ನು ಕುಲಗೆಡಿಸಿ ಕೊಳ್ಳುವಂತಹ ಕೆಲಸ ಮಾಡಿರುತ್ತಾರಂತೆ!

*ಎಸ್.ಜಿ. ರಾಜಶೇಖರರೆಡ್ಡಿ, ಹಿಂದೂಪುರ*
*ಮೊನ್ನೆ ಕನಸಿನಲ್ಲಿ ಬೀ chi ಯವರು ನಿಮ್ಮನ್ನು ವಿಚಾರಿಸಿ, ವಿಮರ್ಶಿಸಿದರಲ್ಲಾ ರಾಮ್‌ಗಾರು?*
ಏನೆಂದರು ರೆಡ್ಡಿಗಾರು? 'be writing' ಎಂದರೋ ಅಥವಾ ಛಿ! ಎಂದರೋ?

*ಜೆ. ಆರ್. ಆದಿನಾರಾಯಣಮುನಿ, ಬೆಂಗಳೂರು*
*ಜ್ಞಾನಕ್ಕೆ ಸಮನಾದ ವಸ್ತು ಯಾವುದು?*
'we- ಜ್ಞಾನ ಅರ್ಥಾತ್ ನಾನು ತೊರೆದು ನಾವು ಎಂಬ ಅರಿವು ಪಡೆವುದು.

*ಮೊಳಕಾಲ್ಮೂರು ಸುರೇಶ್, ಬಳ್ಳಾರಿ*
*ಸರ್ಕಾರವನ್ನು ಉದ್ದೇಶಿಸಿ ಹೇಳುವಾಗ ಘನ ಸರ್ಕಾರ ಎಂದು ಹೇಳುವುದರ ರಹಸ್ಯ?*
ಇರುವುದೆಲ್ಲವನೂ ಘನವಾಗಿ ಕಬಳಿಸುವುದರಿಂದ!

*ಎಲ್.ಎಂ. ಮಾಧವಶಾಸ್ತ್ರಿ, ಶಿವಮೊಗ್ಗ*
*ದೃಶ್ಯಮಾಧ್ಯಮಗಳಲ್ಲಿ ಪದೇ ಪದೇ ಅತಿ ರಂಜಿತ ಸುದ್ದಿಯನ್ನು ಬಿತ್ತರಿಸುತ್ತಿರುವುದು ಎಳೆಯ ಮನಸ್ಸನ್ನು ವಿಕೃತಗೊಳಿಸುವುದಿಲ್ಲವೇ?*




ಪರಿಹಾರ ಸುಲಭ. ನಮ್ಮ ಟಿ.ವಿ.ಗೆ ನಾವೇ ಸೆನ್ಸಾರ್ ಬೋರ್ಡ್ ಆದರಾಯ್ತು!

*ಹೆಚ್. ಆರ್. ಕಡಿವಾಲ, ಬದಾಮಿ*
*ಪ್ರಜಾಪ್ರಭುತ್ವ ಎಂದರೇನು?*
ಮೂರೂ ಬಿಟ್ಟವರಿಗೆ ಮಜಾ ಪ್ರಭುತ್ವ, ಬಂದ್, ರ‍್ಯಾಲಿಗಳಿಂದ ರಜಾಪ್ರಭುತ್ವ, ಶ್ರೀಸಾಮಾನ್ಯನಿಗೆ ಸಜಾಪ್ರಭುತ್ವ!

*ನಾಗಲಕ್ಷ್ಮಿ ರಾಘವೇಂದ್ರ, ಬೆಂಗಳೂರು*
*ನಮ್ಮ ಶಾಲೆಗೆ ಬಂದಿರುವ ಕನ್ನಡ ಪಂಡಿತರು ಹೆಚ್ಚಾಗಿ ಇಂಗ್ಲೀಷನ್ನೇ ಬಳಸುತ್ತಾರಲ್ಲಾ, ಇದೆಂಥ ಪ್ರವೃತ್ತಿ ಅಣ್ಣಯ್ಯಾ?*
ಅನ್ಯಭಾಷೆಗೆ ಆದ್ಯತೆ ಕೊಡುವುದು ಕನ್ನಡಿಗನ ಆಜನ್ಮವಷ್ಟೇ ಅಲ್ಲ, ಈಜನ್ಮ ಸಿದ್ಧಹಕ್ಕೂ ಹೌದು!

*ಆರ್. ಮಧುಸೂದನ್, ಹಾಸನ*
*ವಾಸಿಯಾಗದ ಖಾಯಿಲೆ, ಚೇತರಿಸಿಕೊಳ್ಳದ ಸಂಬಂಧ, ಇವಕ್ಕೆ ಮದ್ದೇ ಇಲ್ಲವೇ?*
ಗುಂಡೇ ಮದ್ದು ಎಂದನೊಬ್ಬ ಕುಡುಕ!

*ಎಸ್. ಎನ್. ಮಹಾಬಲರಾವ್, ನರಸಿಂಹರಾಜಪುರ*
*ಕಚೇರಿಯ ಕುರ್ಚಿ, ಟೇಬಲ್ ಅಧಿಕಾರಿ ಮನೆಯಲ್ಲಿದ್ದರೆ?*
ಅಧಿಕಾರಿಗೆ ಮನೆಯಲ್ಲೂ ಸುಖನಿದ್ರೆ!

*ನರಸಿಂಹ ಎಂ. ಪೈ, ಕಾಸರಗೋಡ*
*ಮನುಷ್ಯನ ನಿಜವಾದ ಬಂಡವಾಳ ಯಾವುದು?*
ಉಸಿರು!

*ಮಹಾವೀರ ಕಾಸಾರ, ಚನ್ನಗಿರಿ*
*ಬಾಳನೌಕೆಗೆ ಚುಕ್ಕಾಣಿ ಯಾವುದು?*
ಆತ್ಮವಿಶ್ವಾಸ

*ಕೆ. ಆರ್. ದೇಸಾಯಿ, ರಾಯಚೂರು*
*ಗಣಿ ಹಗರಣ, ಭೂ ಹಗರಣ, ಮಾನ ಹಗರಣ, ಇದೇನಾ ರಾಜಕಾರಣ?*
ತಪ್ಪೇನು? ಹಗರಣದಿ ಹಣವಿಹುದು, ರಣವಿಹುದು, ಗಣವಿಹುದು, ಹರಣವಿಹುದು; ಇವೆಲ್ಲಾ ರಾಜಕೀಯಕ್ಕೆ ಬೇಕಾದುದು!

*ಶೇಖ್ ಅಹಮ್ಮದ್, ಬಾಳ್ಳುಪೇಟೆ*
*ಲೌ ಮತ್ತು ಡೌ ಗಿರುವ ವ್ಯತ್ಯಾಸವೇನು?*
ಲೌ ಮಾಡೋವ್ನ ಹಾರ್ಟು ಡವ್ ಡವ್ ಅನ್ನತ್ತೆ; ಡೌ ಮಾಡೋವ್ನ ಹಾರ್ಟು ಲಾವ್ ಲಾವ್ ಅನ್ನತ್ತೆ!

*ಮಲ್ಲಿಕಾರ್ಜುನ, ಸಾಂಗಲಿ*
*ಕೋರ್ಟಿನಲ್ಲಿ ಕಣ್ಣು ಕಟ್ಟಿಸಿಕೊಂಡಿರುವ ದೇವತೆಯ ವಿಗ್ರಹವಿರುವುದೇಕೆ?*
ಹಲವು ಸುಳ್ಳ ನ್ಯಾಯವಾದಿಗಳನ್ನು ಆ ದೇವಿ ನೋಡಬಯಸುವುದಿಲ್ಲವಂತೆ!

*ವಸಂತರಾವ್ ಕೊರತಿ, ವಿಜಾಪುರ*
*ಹೆಂಡ ಮತ್ತು ಹೆಂಡತಿ; ಇವೆರಡರಲ್ಲಿ ಹೆಚ್ಚು ಅಪಾಯಕಾರಿ ಯಾವುದು?*
ಹೆಂಡವೇ! ಹೆಂಡತಿಯಿಂದ ಹೆಚ್ಚೆಂದರೆ ಮನೆಯಲ್ಲಿ ಫೈಟ್; ಹೆಂಡದಿಂದ ಸಮಾಜವೇ ಫುಲ್ ಟೈಟ್!

## ಬಹುಮಾನಿತ ಪ್ರಶ್ನೆ

*ಎಂ. ಜಿ. ನೇಹವರ್ಷಿಣಿ, ಬಳ್ಳಾರಿ*
*ಭೂಮಿ ಅಗೆದರೆ ಬರೀ ಮಮ್ಮಿಗಳು ಸಿಗುತ್ತವೆ; ಡ್ಯಾಡಿಗಳು ಸಿಗುವುದು ಯಾವಾಗ?*
ಆ ಮಮ್ಮಿಗಳು ಮೇಕಪ್ ಮಾಡಿಕೊಂಡು ರೀ... ಎಂದು ಕೂಗಿದರೆ ಡ್ಯಾಡಿಗಳು ಹಾಜರ್ ಅಂತೆ!

*ನೆ. ಸು. ಆನಂದ, ಕತ್ರಿಗುಪ್ಪ*
*ಮುತ್ತು ಕೊಡುವವಳು ಬಂದಾಗ ತುತ್ತು ಕೊಟ್ಟವಳನ್ನು ಮರೆಯುವ ಮಗನನ್ನು ಏನೆನ್ನುತ್ತಾರೆ?*
ಮಾತೃವೃಥಾ, ಸತಿವ್ರತ.

*ಗೀತಾ ಬರ್ಲ, ಬೆಂಗಳೂರು*
*ಭೂಮಿಗೆ ಭಾರವಾದ ವಸ್ತು ಯಾವುದು?*
ಹಗುರವಾದ ವ್ಯಕ್ತಿತ್ವವುಳ್ಳವರ ಪಡೆ!

*ಬಾ.ರಂ. ಸುರೇಶ್, ಶಿವಮೊಗ್ಗ*
*ನನ್ನ ವಳಿಗೆ ಪ್ರೀತಿ ಹೆಚ್ಚಾದಾಗ ನನ್ನನ್ನು ಬೈಯುತ್ತಾಳೆ; ಏಕಿರಬಹುದು ಶಿವಾ? ಪರಿಹಾರವೆಂತು?*



ಸರಸದ ರಸದಲ್ಲಿ ಬೈಗ್ಗುಳೂ ಪ್ರೀತಿಮಾತುಗಳೇ; ಅನುಭವಿಸಿಬಿಡಿ.

*ಕುಮಾರ ಚಲವಾದಿ, ಹೊಳೆನರಸಿಪುರ*
*ದೇವರಿಗೆ ಅನೇಕ ಹೆಸರುಗಳು. ರಾಜಕಾರಣಿಗಳಿಗೆ?*
ದೇವನಿಗಿಂತಲೂ ಹೆಚ್ಚು ಮಂಗಳಾರತಿ, ಸಹಸ್ರನಾಮಗಳು!

*ಕೆ. ಮುತ್ತುಕದಹಳ್ಳಿ ಮಹೇಶ್, ಶಿಡ್ಲಘಟ್ಟ*
*ಪ್ರಿಯತಮ ಪ್ರಿಯತಮೆಯ ಮುತ್ತುಗಳಿಗೆ ಕಾಯುವನಲ್ಲಾ, ಅದರಲ್ಲಿ ಅಂತದ್ದು ಏನಿದೆ?*
ಅದು ಒಮ್ಮೆಯೇ ಅರ್ಥವಾಗದುದರಿಂದಲೇ ಅವನು ಪದೇ ಪದೇ ಅದಕ್ಕೆ ಕಾಯುವುದಂತೆ!

■ ರಾಮ್